IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ರಾಮಧಾನ್ಯ ಚರಿತ್ರೆ : ಬಂಡಾಯದ ಧ್ವನಿ

**–ಡಿ.ಡಿ. ಮಾಳಗಿ**

ಲೇಖಕರು

ಶ್ರೀ ಡಿ.ಡಿ.ಮಾಳಗಿ

ನಿವೃತ್ತ ಡಿ.ಎಸ್.ಪಿ

ತುಳಸಿ ನಿವಾಸ, ಮನೆ ನಂ: 73

ವಾಸವಿ ಕಲ್ಯಾಣ ಮಂಟಪದ ಹತ್ತಿರ

ಆರ್.ಎನ್.ಶೆಟ್ಟಿ ಶಾಲೆಯ ಎದುರಿಗೆ

ಗೋಕುಲ ರೋಡ ಹುಬ್ಬಳ್ಳಿ–24

ಸಮ ಸಮಾಜ ನಿರ್ಮಾಣದ ಕಾರಣ ಬಹುಕಾಲದಿಂದಲೂ ಸಂಘರ್ಷದ ಹಾದಿ ಸಾಮಾನ್ಯರ ಅನಿವಾರ್ಯತೆಯಾಗಿದೆ, ಎಂಬುದಂತೂ ಗಮನಾರ್ಹವಾದ ಸಂಗತಿ ಕೆಲವು ಅದು ಒಂದು ಸಂದರ್ಭದಲ್ಲಿ ಭೌತಿಕ ಯುದ್ಧವಾದರೆ ಮತ್ತೊಂದು ಸಂದರ್ಭದಲ್ಲಿ ಬೌದ್ಧಿಕ ಯುದ್ಧವಾಗಿದೆ. ಪ್ರಾಚೀನ ಕರ್ನಾಟಕದ ಕಾವ್ಯಗಳಲ್ಲಿ ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಇದರ ಹೊಳವುಗಳು ಲಭ್ಯವಾಗಿವೆ. ಪಂಪನ ಕಾವ್ಯಗಳಲ್ಲಿ ಕರ್ಣನ ಬಂಡಾಯದ ಧ್ವನಿ ಕೇಳಿಸಿದರೆ, ಹರಿಹರನ ರಗಳೆಗಳಲ್ಲಿ ಶಿವಭಕ್ತರ ಬಂಡಾಯದ ಧ್ವನಿ ಕೇಳಿಸುತ್ತದೆ. ವಚನ ಸಾಹಿತ್ಯವಂತೂ ಸಮಾನತೆಗೆ ಅಡಿಗಲ್ಲುಹಾಕಿದ ಸಾಮಾಜಿಕ ಚಳುವಳಿಯಾಗಿದೆ. ಅದರಂತೆ ಕೀರ್ತನಕಾರರ ಸಾಹಿತ್ಯವು ಅಷ್ಟೇ ಮಹತ್ವದ್ದಾಗಿದೆ. ಕೀರ್ತನ ಸಾಹಿತ್ಯದ ಅಶ್ವಿನಿ ದೇವತೆಗಳೆಂದೇ ಪ್ರಸಿದ್ಧರಾದ ಕನಕ–ಪುರಂದರರ ಸಾಹಿತ್ಯ ಬೌದ್ಧಿಕ ಸಂಘರ್ಷದ ರೂಪವಾಗಿದೆ. ಕನಕದಾಸರ ಕಾವ್ಯಸೃಷ್ಟಿ ಸಾಹಿತ್ಯ ಪರಂಪರೆಯಲ್ಲಿ ವಿನೂತನವಾದದ್ದು. ಅವರ ರಾಮಧಾನ್ಯ ಚರಿತ್ರೆಯಂತೂ ಸಂಘರ್ಷದ ನೆಲೆಯಲ್ಲಿಯೇ ರಚಿತವಾದ ಅಣಕು ಮತ್ತು ವಿಡಂಬನಾತ್ಮಕ ಕಾವ್ಯವಾಗಿದೆ.

ಕವಿ ಕನಕದಾಸರು ಬದುಕಿ ಬಾಳಿದ್ದು ವಿಜಯನಗರ ಸಾಮ್ರಾಜ್ಯದ ಉಚ್ಛ್ರಾಯ ಕಾಲದಲ್ಲಿ. ಅಲ್ಲದೆ ಅದರ ಅವನತಿಯನ್ನೂ ಕಣ್ಣಲ್ಲೇ ಕಂಡವರು. ಅಂತಹ ಸ್ಥಿತಿಯಲ್ಲಿ ವ್ಯಾಸರಾಯರಿಂದ ದಾಸ ದೀಕ್ಷೆ ಪಡೆದು ತಮ್ಮ ವಿದ್ವತ್ ಸಾಮರ್ಥ್ಯದಿಂದ ಪಟ್ಟಭದ್ರಹಿತಾಸಕ್ತಿಗಳಿಗೆ ಸಿಂಹಸ್ವಪ್ನವಾದರು. ಸಮಾಜದ ಡಾಂಭಿಕತೆ, ಅಂಧಶ್ರದ್ಧೆಗಳನ್ನು ಕಟುವಾಗಿ ವಿರೋಧಿಸಿದವರು. ಇವರ ಕಾವ್ಯಗಳಲ್ಲಿ ಬಹಳಷ್ಟು ಚರ್ಚೆಗೆ ವಸ್ತುವಾದದ್ದು ರಾಮಧಾನ್ಯ ಚರಿತ್ರೆ. ಈ ಕಾವ್ಯ ಕೇವಲ 158 ಭಾಮಿನಿ ಷಟ್ಪದಿಗಳಿಂದ ಕೂಡಿದ್ದು ಒಂದು ಖಂಡಕಾವ್ಯವಾಗಿದೆ. ಅದರಲ್ಲಿ ಯಾವುದೇ ರೀತಿಯ ಬೆಡಗು ಬಿನ್ನಾಣಗಳಿಲ್ಲ. ಕಣ್ಣು ಮೂಗುಗಳನ್ನು ಕೋರೈಸುವ ವರ್ಣಗಂಧಗಳಿಲ್ಲ, ಸಿಡಿಲು ಗುಡುಗುಗಳ ಅಬ್ಬರವಿಲ್ಲ, ನದಿಯ ಮೊರೆತವಿಲ್ಲ, ಗೂಳಿಯ ಗುಟುರಿಲ್ಲ, ಅಲಂಕಾರಗಳ ಬೊಬ್ಬೆಯಿಲ್ಲ, ನಿರಾಂಡಬರೆಯಾದ ಗ್ರಾಮೀಣ ಮುಗ್ದೆಯ ಸದ್ದಿಲ್ಲದ ಮುಗ್ಧ ಸ್ವಭಾವವಿದೆ. ಇಷ್ಟು ಸರಳತೆಯನ್ನು ಕವಿ ಕಾವ್ಯಕ್ಕೆ ನೀಡಿದ ಉದ್ದೇಶವೂ ಹೇಳಲು ಹೊರಟಿರುವವರು ಕನಕದಾಸರು. ವಸ್ತುವು ಯಾವುದೇ ಆಡಂಬರ, ಮೇಲಸ್ತರದ ವೈಭವದ ವ್ಯಕ್ತಿಯದಲ್ಲ. ಅದು ಬಡವರ ಧ್ವನಿಯಾಗಿ ನಿಂತ ರಾಗಿಯದೆಂಬ ಸತ್ಯದ ಅರಿವು ಕವಿಗಿದೆ.

ಈ ಕಾವ್ಯ ಬಡವರ ಬಂಡಾಯದ ಧ್ವನಿಯಾಗಿದೆ ಎಂಬುದಂತು ಸತ್ಯ. ಅನೇಕ ವಿದ್ವಾಂಸರು ತಮ್ಮ ಅಭಿಪ್ರಾಯವನ್ನು ಇದರ ಚರ್ಚೆಯಲ್ಲಿ ಉಸುರಿದ್ದುಂಟು. " ಕೃತಿಯಲ್ಲಿ ಬರುವ ವ್ರೀಹಿ (ಭತ್ತ) ಮತ್ತು ನರೆದಲೆಗ(ರಾಗಿ)ರ ಸಂವಾದ ಪ್ರೊ.ದೇಜಗೌಡರಿಗೆ ಸ್ಪೃಶ್ಯ ಮತ್ತು ಅಸ್ಪೃಶ್ಯರ ನಡುವಣ ವರ್ಗ ಹೋರಾಟವಾಗಿ ಕಂಡಿದ್ದರೆ, ಡಾ॥ಹಿ.ಸಿ.ರಾಮಚಂದ್ರ ಗೌಡರಿಗೆ ಅದು ಬಂಡಾಯದ ಧ್ವನಿಯಾಗಿ ಕೇಳಿಸಿದೆ. ಅದೇ ಪ್ರಸಂಗ ಡಾ॥ ಎಂ.ಚಿದಾನಂದ ಮೂರ್ತಿಯವರಿಗೆ ಶ್ರೀಮಂತ ಮತ್ತು ಬಡವರ ಕುರಿತು ಒಂದು ಅಲಿಗರಿಯಾಗಿ ಗೋಚರಿಸಿದೆ. ಡಾ॥ ಸಾ.ಶಿ.ಮರುಳಯ್ಯನವರಿಗೆ ಸಂಸ್ಕೃತಿ ಮತ್ತು ಕನ್ನಡ ಭಾಷೆಗಳ ನಡುವಣ ಸಂಘರ್ಷವಾಗಿ ಕಂಡಿದೆ. ಹೀಗೆ ಇಷ್ಟು ಚಿಕ್ಕ ಕಾವ್ಯ ಪ್ರಸಿದ್ಧ ವಿದ್ವಾಂಸರ ದೃಷ್ಟಿಯಲ್ಲಿ ಅವರವರ ಊಹೆಗೆ ಮತ್ತು ವಿಚಾರಧಾರೆಗೆ ಅನುಗುಣವಾಗಿ ಅಭಿವ್ಯಕ್ತಪಡಿಸಿರುತ್ತಾರೆ. ಅದು ಏನಿದ್ದರು ಕನಕದಾಸರ ನೈಜ ಕಲ್ಪನೆ ಮಾತ್ರ ಬಂಡಾಯವಾಗಿತ್ತು. ಬಡವರನ್ನು ಎತ್ತಿ ಹಿಡಿಯದ ಆ ಕಾಲಘಟ್ಟದಲ್ಲಿ ಪುರುಷೋತ್ತಮನಿಂದ ಹೇಳಿಸುವ ಪ್ರಜ್ಞೆ ಕನಕದಾಸರಿಗಲ್ಲದೇ ಮತ್ತಾರಿಗೂ ಸಾಧ್ಯವಾಗಿಲ್ಲ ಎಂಬುದನ್ನು ಕನಕದಾಸರು ತಮ್ಮ ರಾಮಧಾನ್ಯ ಚರಿತೆಯಲ್ಲಿ ತಿಳಿಯಪಡಿಸಿದ್ದಾರೆ.

ತನ್ನ ಕೃತಿ ಮಾಹಾಕಥೆ ಎಂದು ಕವಿ ಮೇಲಿಂದ ಮೇಲೆ ಘೋಷಿಸುವಲ್ಲಿ 'ಭೂಮಿಗಚ್ಚರಿ'ಯಾದ ಕಾವ್ಯದಲ್ಲಿ ಅದು ವಿಶಿಷ್ಟಕೃತಿ ಎನ್ನುವ ಬಗ್ಗೆ ಅವನ ಆತ್ಮಪ್ರತ್ಯಯ ಅಭಿವ್ಯಕ್ತವಾಗುತ್ತದೆ. ರಾಗಿ–ನೆಲ್ಲುಗಳ ಕಲಹದ ಕಥೆಯನ್ನು ರಾಮಾಯಣದ ಮಹಾಕಾವ್ಯದೊಳಗೆ ಅಂತರ್ಗತಗೊಳಿಸಿ, ಅದರ ಘನತೆಯನ್ನು ಹಿರಿದುಗೊಳಿಸಿದ್ದಾರೆ. ಶ್ರೀ ಮದ್ರಾಮಾಯಣದ ಭಾಗವಾಗಿ ಕಥಿತವಾಗಿರುವ ಈ ಪ್ರಸಂಗ ಮಹತ್ವ ಪೂರ್ಣವಾದದ್ದಂದೇ ಹೇಳಬೇಕಾಗಿದೆ. ಇದು ಸಂಭವಿಸಿದ್ದು ಶ್ರೀ ರಾಮಚಂದ್ರನ ಜೀವನದಲ್ಲಿ ನಿರೂಪಿಸುವ ಸೂತಪುರಾಣಿಕ ಶಾಂಡಿಲ್ಯಮುನಿ ; ಆಲಿಸುವರು ಪಾಂಡವರು ಇಲ್ಲಿ ಹೇಳುವ ವಿಷಯ ರಾಗಿಯ ಗುಣ ಬಯಲುಗೊಳಿಸುವುದು. ಹೇಳುವವರೂ ಯಾವುದನ್ನು ಅಪೇಕ್ಷಿಸದವರು, ಕೇಳುವವರು ಎಲ್ಲವನ್ನೂ ತ್ಯಜಿಸಿದವರು ಮತ್ತೇ ಬಂಡಾಯದ ಜ್ವಾಲಾಮುಖಿಯನ್ನು ಒಡಲೊಳಗೆ ಇರಿಸಿಕೊಂಡವರು ಎಂಬ ವಾಸ್ತವ ಸತ್ಯವನ್ನು ಕಾವ್ಯ ಸೂಚ್ಯವಾಗಿ ತಿಳಿಸುತ್ತದೆ.

'ಶ್ರೀ ರಾಮ ರಾವಣ ಸಂಹಾರ ನಂತರ ಅಯೋಧ್ಯೆಗೆ ಮರಳುವ ಮಾರ್ಗದಲ್ಲಿ ಮುಚುಕುಂದಾಶ್ರಮದಲ್ಲಿ ತಂಗಬೇಕಾಗುತ್ತದೆ. ರಾಮಚಂದ್ರನ ಆಗಮನ ವಾರ್ತೆಯನ್ನು ಕೇಳಿದ ಚೌಬಾರಿ ಗೌತಮಾದಿ ಋಷಿಗಳು ಅವನ ದರ್ಶನಾರ್ಥವಾಗಿ ಪರ್ಣ ಕುಟಿರದಲ್ಲಿ ನೆರೆಯುತ್ತಾರೆ. ವಿವಿಧ ಭಕ್ಷ್ಯ ಭೋಜ್ಯಗಳಿಂದ ಸೀತಾ ರಾಮ ಮತ್ತು ಲಕ್ಷ್ಮಣರನ್ನೂ ಕಪಿ ವೀರರನ್ನೂ ಸತ್ಕರಿಸುರತ್ತಾರೆ. ಅವರುಂಡ ಭೋಜ್ಯ ವಸ್ತುಗಳ ರುಚಿ ಮತ್ತು ವೈಭವನ್ನು ವಿವರಿಸುವಂತೆ ರಾಮ ಹನುಮಂತನನ್ನು ಕೇಳಿದಾಗ, ಹನುಮಂತ ತನಗೆ ತೃಪ್ತಿ ನೀಡಿದ ಆ ಧಾನ್ಯಗಳನ್ನು ಕಣ್ಣಾರೆ ನೋಡುವ ಬಯಕೆಯನ್ನು ವ್ಯಕ್ತಪಡಿಸುತ್ತಾನೆ. ಆಗ ಗೌತಮ ನೆಲ್ಲು, ನೆರದಗಲ, ಹಾರಕ ಮೊದಲಾದ ನಾನಾಧಾನ್ಯಗಳನ್ನು ತರಿಸುತ್ತಾರೆ. ಅವುಗಳ ಪೈಕಿ ಪರಮ ಸಾರದ ಹೃದಯ ಯಾರೆಂಬ ಪ್ರಶ್ನೆ ಮುನಿಗಳನ್ನು ಕಾಡುತ್ತಿದ್ದಾಗ ಒಬ್ಬೊಬ್ಬ ಮುನಿಯು ಒಂದೊಂದು ಧಾನ್ಯವನ್ನು ಹೆಸರಿಸಿದಾಗ ಗೌತಮ ನೆರೆದಲೆಗನೇ ಮೇಲೆಂದು ಪ್ರಶಂಸಿಸುತ್ತಾನೆ. ಆಗ ಹಿಗೆ ಕೋಪೋದ್ದೀಪಿತನಾಗಿ ನೆರೆದ ಮಹಾ ಸಭೆಯ ಮುಂದೆ ತನ್ನ ಗುಣಾವಳಿಯನ್ನೂ, ಸ್ಥಾನಮಾನಗಳನ್ನೂ ಕುರಿತು ಧೀರ್ಘವಾಗಿ ವಾದ ವಿವಾದಗಳು ನಡೆದು ನೆರದೆಗಲವನ್ನು ಕ್ಷುಲ್ಲಕ ರೀತಿಯಲ್ಲಿ ಹೀಯಾಳಿಸುತ್ತಾನೆ. ಈ ಅವಮಾನದ ವಿರುದ್ಧ ಬಂಡಯ ಮಾಡಿದ್ದ ನೆರೆದಲೆಗೆ ಅದಕ್ಕೆ ಕಾರಣ ಸಮಾನತೆಗಾಗಿ ನಡೆಸಿದ ಸಂಘರ್ಷ. ಇಲ್ಲಿ "ಕುಲಹೀನ" ಎಂಬ ಮಾತು ವ್ರೀಹಿಯ ಬಾಯಿಂದ ನುಡಿಸಿದ ಕ್ರಮ ಹೀಗಿದೆ.

"ಏನೆಲವೊ ನರೆದಲೆಗ ನೀನು ಸ

ಮಾನನೇ ಎನಗಿಲ್ಲಿ ನಮ್ಮನು

ದಾನವಾಂತಕೆ ಬಲ್ಲನಿಬ್ಬರ ಹೆಚ್ಚು ಕುಂದುಗಳ

ಜಾನಕೀ ಪತಿ ಸನಿಹದಲಿ ಕುಲ

ಹೀನ ನೀನು ಪ್ರತಿಷ್ಠೆ ಸುಡುಮತಿ

ಹೀನ ನೀನೆಂದೆನುತ ಖತಿಯಲಿ ಬೈದು ಭಂಗಿಸಿದ॥

ಎಂಬ ಮಾತುಗಳು ವ್ರೀಹಿಯ ವಿರುದ್ಧ ನರೆದಲೆಗೆ ಬಂಡಾಯವೇಳುವಂತೆ ಮಾಡಿತು. ಗುಣಾವಗುಣಗಳ ವಾಕ್ ಹೀಗೆ ಇಬ್ಬರ ಸಂಭಾಷಣೆ ಮುಂದುವರೆಯುತ್ತದೆ. ಪ್ರದರ್ಶನವಾಗುತ್ತದೆ. ಬತ್ತದ ಮಾತಿನಲ್ಲಿ ವ್ಯವಸ್ಥೆ ಪರವಾದ ಘೋಷಣೆಯಿದೆ. ಸಾಮಾನ್ಯರ ತುಚ್ಛೀಕರಣವಿದೆ, ಸಿರಿವಂತಿಕೆಯ ಮದವಿದೆ, ಮಡಿವಂತಿಕೆಯ ಅಹಂಭಾವವಿದೆ, ತಾನು ಮೇಲೆಂಬ ಸೊಕ್ಕಿದೆ, ಪುರೋಹಿತಶಾಹಿಯ ಮತ್ತು ಶ್ರೀಮಂತ ವರ್ಗದ ಪ್ರಚ್ಛನ್ನ ಸ್ವರೂಪ ಎದ್ದು ಕಾಣುತ್ತದೆ, ಆದರೆ ರಾಗಿಯ ಪ್ರತಿಭಟನೆಯಲ್ಲಿ ಕ್ರಾಂತಿಯ ಸುಳುವಿದೆ. ಶ್ರೀ ಸಾಮಾನ್ಯನ ಜಾಗೃತಿಯಿದೆ ಸ್ನ ಬಂಧ ಆತ್ಮವಿಶ್ವಾಸವಿದೆ ಎದೆಗುಂದದೆ ಹೋರಾಡುವ ಛಲವಿದೆ.

ಹೀಗಾಗಿ ಈ ರಾಮಧಾನ್ಯ ಚರಿತ್ರೆಯು ಬಡವರ ಧ್ವನಿಯ ಸುಂದರ ರೂಪಕವಾಗಿದೆ. ಬಂಡಾಯದ ಕೂಗಾಗಿದೆ. ಕವಿಯ ಬಡವರ ಮೇಲಿರುವ ಪ್ರೇಮ ಇಲ್ಲಿ ವ್ಯಕ್ತವಾಗಿದೆ. ಅದಕ್ಕಿಂತ ರಾಗಿ ಶ್ರೇಷ್ಠ ಎಂದು ರಾಮನಿಂದಲೇ ಅಭಿದಾನ ಪಡೆಯುವ ಪ್ರಸಂಗ ಬಡವರಿಗೆ ಸಂದ ಮಾನ್ಯತೆಯಾಗಿದೆ. ಇಲ್ಲಿ ದುಡಿಮೆಗಾರರ ಧ್ವನಿಯಿದೆ. ಇದು ನೊಂದವರ ಪ್ರತಿನಿಧಿಯಾಗಿ ಕಾವ್ಯದಲ್ಲಿ ಪ್ರತಿಭಟಿಸಿದೆ.

ರಾಗಿಯ ಮಹತ್ವವನ್ನು ಎತ್ತಿ ಹಿಡಿಯುವ ಉದ್ದೇಶದಿಂದಲೇ ಕನಕರು ಈ ಕಥೆಯನ್ನು ಸೃಷ್ಟಿಸಿರುವಂತೆ ಕಾಣುತ್ತದೆ. ನೆಲ್ಲು ಮತ್ತು ನೆರೆದಲೆಗಳ ವಾಗ್ವಾದದ ಹಿಂದಿರುವ ಕನಕರ ಧ್ವನಿ ಬಂಡಾಯ ದೋರಣೆಯಾಗಿದೆ. ಜನಸಾಮಾನ್ಯರ ಪ್ರತಿನಿಧಿಯಾದ ರಾಗಿಗೆ ರಾಮನಿಂದ ಮಾನ್ಯತೆ ದೊರೆತಿದೆ ಎಂಬುದಂತೆ. ಕನಕರ ಕಾವ್ಯದಲ್ಲಿ ಬಡವರು, ನೊಂದವರು, ದಲಿತರು, ಗೆದ್ದಿದ್ದಾರೆ ಎಂಬುದಂತು ನಿರ್ವಿವಾದ ಸಂಗತಿಯಾಗಿದೆ. ಇದೊಂದು ಸಮಾಜ ವಿಡಂಬಿಸುವ ಅಣುಕು ಕಾವ್ಯವಾಗಿದೆ. ಇದು ಸ್ವತಂತ್ರವಾದ ಕವಿ ಕಲ್ಪನಾಸಿದ್ದವಾದ ಕೃತಿ. ಇದು ವಸ್ತು ವೈವಿಧ್ಯದ ದೃಷ್ಟಿಯಿಂದಲೂ ವಿಶಿಷ್ಟತೆಯಿಂದ ಎದ್ದು ಕಾಣುವಂತದ್ದು.

**ಸಹಾಯಕ ಗ್ರಂಥಗಳು:**


* ಡಾ. ದೇ.ಜವರೇಗೌಡ– ಕನಕದಾಸರ ರಾಮಧಾನ್ಯ ಚರಿತ್ರೆ

* ಡಾ. ಸಾ.ಶಿ.ಮರುಳಯ್ಯ– ಕನಕದಾಸರ ಕಾವ್ಯಭಾಗ–2

* ಕೆ. ರೇವಣಪ್ಪ– ಆತ್ಮ ಯಾವ ಕುಲ

* ಮಳಲಿ ವಸಂತಕುಮಾರ್– ಕನಕದಾಸ